# ಭೈರವ್ ಸೆ ಭೈರವಿ ಥಕ್..

## ವಿಶ್ವಶಾಂತಿಗಾಗಿ ಸಂಗೀತ ಯಾತ್ರೆ..!



ಸಮಾಜದ ಸ್ವಾಸ್ಥ್ಯ ಪೊರೆಯುವಲ್ಲಿ ಸಂಗೀತದ ಪಾತ್ರ ಅಪರಿಮಿತ. ವ್ಯಕ್ತಿ–ವ್ಯಕ್ತಿಯ ನಡುವಿನ ಸುಮಧುರ ಬಾಂಧವ್ಯ ನಿರ್ಮಿಸುವಲ್ಲಿಯೂ ಮಾಧುರ್ಯಪೂರ್ಣ ಸಂಗೀತ ಸಹಕಾರಿ. ಶಾಂತಿ, ನೆಮ್ಮದಿ ಜೀವನದ ಅವಿಭಾಜ್ಯ ಅಂಗ; ಹಾಗೆಯೇ ಸಂಗೀತವೂ. ಹಿಂದೂಸ್ತಾನಿ ಸಂಗೀತದ ಬನಾರಸ್ ಘರಾಣೆಯ ಮೇರು ಕಲಾವಿದರಾದ ಪಂ.ರಾಜನ್–ಸಾಜನ್ ಮಿಶ್ರಾ ಅವರು ವಿಶ್ವಶಾಂತಿಗಾಗಿ ಸಂಗೀತದೊಂದಿಗೆ ಪ್ರಪಂಚ ಪರ್ಯಟನೆ ಹೊರಟಿದ್ದಾರೆ. ಭೈರವ್ ಸೆ ಭೈರವಿ ಥಕ್.. ಶೀರ್ಷಿಕೆಯಲ್ಲಿ ನಡೆಸುತ್ತಿರುವ ಈ ಸಂಗೀತ ಪಯಣದ ಉದ್ದೇಶವನ್ನು ಜುಗಲ್‌ಬಂದಿ ಗಾಯಕರು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

■ ಸಂದರ್ಶನ: **ಉಮಾ ಅನಂತ್**

ವಿಶ್ವಶಾಂತಿಗಾಗಿ 'ಸಂಗೀತ ಯಾತ್ರೆ' ಆರಂಭವಾಗಿದೆ. ಹಿಂದೂಸ್ತಾನಿ ಸಂಗೀತದ ಬನಾರಸ್ ಘರಾಣೆಯ ಕಂಪನ್ನು ವಿಶ್ವದಾದ್ಯಂತ ಪಸರಿಸಿ ಶಾಂತಿ ನೆಲಸುವಂತೆ ಮಾಡಲು ಈ ಸಂಗೀತ ಪ್ರಕಾರದ ಮೇರು ಗಾಯಕರಾದ ಪಂ.ರಾಜನ್–ಸಾಜನ್ ಮಿಶ್ರಾ ಸಹೋದರರು ಪಣ ತೊಟ್ಟಿದ್ದಾರೆ. 'ಮ್ಯೂಸಿಕ್ ಈಸ್ ವರ್ಶಿಪ್ ಫಾರ್ ಅಸ್..' (ಸಂಗೀತವೇ ನಮಗೆ ಪೂಜೆ).. ಇವರ ಪ್ರತಿಯೊಂದು ಸಂಗೀತ ಕಛೇರಿ ಆರಂಭವಾಗುವುದೇ ಈ ವ್ಯಾಖ್ಯಾನದೊಂದಿಗೆ. ಈ ಜುಗಲ್‌ಬಂದಿ ಗಾಯಕರ ಜನ್ಮಸ್ಥಳವಾದ ವಾರಣಾಸಿಯಿಂದ 2017ರ ನವೆಂಬರ್ 18ರಂದು ಆರಂಭವಾದ ಈ 'ನಾದ ಯಾತ್ರೆ' ಅಹಮದಾಬಾದ್, ಕೋಲ್ಕತ್ತಾ, ದೆಹಲಿ, ಬೆಂಗಳೂರುಗಳಲ್ಲಿ ನಾದದ ಕಂಪನ್ನು ಪಸರಿಸಲಿದೆ. ಮುಂದಿನ ದಿನಗಳಲ್ಲಿ ಪುಣೆ, ಮುಂಬಯಿ, ಲೂಧಿಯಾನ, ಪಾಟ್ನಾ, ಲಕ್ನೋ ಗಳ ಮೂಲಕ ಹಾದು ಹೋಗಿ ಮಾರ್ಚ್ 2018ರ ವೇಳೆಗೆ ದಕ್ಷಿಣ ಏಷ್ಯಾ ರಾಷ್ಟ್ರಗಳನ್ನು ತಲುಪಲಿದೆ. ಅಲ್ಲಿಂದ ಮುಂದೆ ಕೆನಡ, ಅಮೆರಿಕ, ಇಂಗ್ಲೆಂಡ್, ಯೂರೋಪ್‌ನ ಹಲವು ಭಾಗಗಳಲ್ಲಿ, ಆಸ್ಟ್ರೇಲಿಯಾಕ್ಕೆ ಹೋಗಿ ಮುಂದೆ ನವೆಂಬರ್‌ನಲ್ಲಿ ನ್ಯೂಜಿಲಂಡ್ ನಲ್ಲಿ ಈ ಸಂಗೀತ ಯಾತ್ರೆ ಸಂಪನ್ನಗೊಳ್ಳಲಿದೆ. ಒಟ್ಟು 50 ಕಛೇರಿಗಳ ಗುರಿ ಈ ಸಂಗೀತ ಯಾತ್ರೆಯದ್ದು.

'ಭೈರವ್ ಸೆ ಭೈರವಿ ಥಕ್' ಪರಿಕಲ್ಪನೆಯಲ್ಲಿ ಬೆಳಗಿನ ಸುಮಧುರ ರಾಗ 'ಭೈರವ್'ನಿಂದ ಹಿಡಿದು ಮಂಗಳ ರಾಗ 'ಭೈರವಿ'ವರೆಗೂ ಹಲವು ರಾಗಗಳು ಅನುರಣಿಸುತ್ತವೆ. ಬೆಳಗಿನಿಂದ ಸಾಯಂಕಾಲದವರೆಗಿನ ಪ್ರಹರ ರಾಗಗಳನ್ನು ಪ್ರಸ್ತುತಪಡಿಸಿ ಆ ಎಲ್ಲ ರಾಗಗಳ ಸವಿಯನ್ನು ಕೇಳುಗರಿಗೆ ಉಣಬಡಿಸುವುದು, ಆ ಮೂಲಕ ಸೌಹಾರ್ದ ವಾತಾವರಣ ಸೃಷ್ಟಿಸುವುದು ಇದರ ಉದ್ದೇಶ. ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಚಿತ್ರಕಲಾ ಪರಿಷತ್ತಿನಲ್ಲಿ ಫೆ. 11ರಂದು ಬೆಳಿಗ್ಗೆ ಈ ಜುಗಲ್‌ಬಂದಿ ಗಾಯಕರ ಕಛೇರಿ ಇದೆ. 'ಭೈರವ್ ಸೆ ಭೈರವಿ ಥಕ್' ಸರಣಿಯಲ್ಲಿ ಈ ಗಾಯಕರು ಬೆಳಗಿನ ರಾಗಗಳನ್ನು ಅಂದು ಪ್ರಸ್ತುತಪಡಿಸುವರು.

ಮೊನ್ನೆ ಮೊನ್ನೆಯಷ್ಟೇ ಮೂಡುಬಿದಿರೆಯಲ್ಲಿ ಡಾ.ಮೋಹನ್ ಆಳ್ವ ಅವರ ನೇತೃತ್ವದಲ್ಲಿ ನಡೆದ 'ಆಳ್ವಾಸ್ ವಿರಾಸತ್'ನಲ್ಲಿ ಜೀವಮಾನದ ಸಂಗೀತ ಸಾಧನೆಗಾಗಿ 'ಆಳ್ವಾಸ್ ವಿರಾಸತ್ ಪ್ರಶಸ್ತಿ' ಯನ್ನು ಈ ಗಾಯಕರು ಮುಡಿಗೇರಿಸಿಕೊಂಡರು. ಪದ್ಮಭೂಷಣ